ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

ಸಿ.ಸಿ. ಸಂಖ್ಯೆಃ **844/2022**

ಪಿರ್ಯಾದಿ : ಪುಷ್ಪರಾಜ್ ಜೈನ್,
ವಯಸ್ಸು ಸುಮಾರು 40 ವರ್ಷ,
ಬಿನ್ ಶ್ರೀಪಾಲಯ್ಯ,
ವಾಸಃ ಎಸ್.ಕೆ. ಮೇಗಲ್, ಸಂಸೆ ಗ್ರಾಮ ಮತ್ತು ಅಂಚೆ,
ಕಳಸ ಹೋಬಳಿ, ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿ : ಶೋಭ ಶೇಖರ್,
ವಯಸ್ಸು ಸುಮಾರು 40 ವರ್ಷ,
ಕೊಂ ಸೋಮಶೇಖರ್,
ವಾಸಃ ನಂ. 17, 6 ನೇ ತಿರುವು,
ಸುದಾಮ ನಗರ, ಅಯ್ಯಪ್ಪ ದೇವಸ್ಥಾನದ ರಸ್ತೆ,
ಬೆಂಗಳೂರು-560027.

ಆಪಾದನೆಯ ಸಾರಾಂಶ

ಶ್ರೀಮತಿ ಸುರಕ್ಷ ಕೆ.ಕೆ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಸಂಚಾರಿ ನ್ಯಾಯಾಲಯ ಕಳಸ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ಪಿರ್ಯಾದುದಾರರನ್ನು 2021 ರ ಮೇ ತಿಂಗಳಲ್ಲಿ ಸಂಪರ್ಕಿಸಿ, ನಿಮ್ಮ ಕುಟುಬ ನಿರ್ವಹಣೆಗಾಗಿ ಹಾಗೂ ತುರ್ತು ಅವಶ್ಯಕತೆಗಳಿಗೋಸ್ಕರ ಅವರಿಂದ 2021 ರ ಜೂನ್ ತಿಂಗಳಿನಲ್ಲಿ 7,50,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಸಿಂಡಿಕೇಟ್ ಬ್ಯಾಂಕ್, ಶಾಂತಿನಗರ ಶಾಖೆ, ಬೆಂಗಳೂರು ಚೆಕ್ ಸಂಖ್ಯೆಃ 754571, ದಿನಾಂಕ 25.03.2022, ರೂ.7,50,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಕೆನರಾ ಬ್ಯಾಂಕ್, ಕಳಸ ಶಾಖೆಗೆ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds Insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 02.07.2022 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?
ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ದಿನಾಂಕ 12.09.2025 ರಂದು ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ಸಹಿ/-

ಮೂಡಿಗೆರೆ
ದಿನಾಂಕಃ 12.09.2025

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.